# ಏನು ಹೇಳಲಿ ತಂಗಿ ತಿಮ್ಮಯ್ಯನ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** The wordings are as per Ref. 1. The wordings in Ref. 2 are similar to Ref. 1 except few differences, which are marked in yellow highlights.
4. **Note:** The wordings followed by the singer is similar to above referred books.
5. **Note:** The songs: "ಕನಸು ಕಂಡೆನೆ ಮನದಲ್ಲಿ ಕಳವಳಗೊಂಡೆನೆ" ("kanasu kanDene manadalli kaLavaLagonDene") and "ಏನು ಹೇಳಲಿ ತಂಗಿ ತಿಮ್ಮಯ್ಯನ ಪಾದವನು ಕಂಡೆ" ("Enu hELali tangi timmayyana pAdavanu kanDe") are same. These are listed separately under these names, to avoid hardship to visitors while searching this song.

ರಾಗ: ತುಜಾವಂತಿ ತಾಳ: ಅಟ್ಟ

ಕನಸು ಕಂಡೆನೆ ಮನದಲ್ಲಿ ಕಳವಳಗೊಂಡೆನೆ
ಏನು ಹೇಳಲಿ ತಂಗಿ ತಿಮ್ಮಯ್ಯನ ಪಾದವನು ಕಂಡೆ ॥ ಪ ॥

ಪೊನ್ನದ ಕಡಗನಿಟ್ಟು ತಿಮ್ಮಯ್ಯ ತಾ
ಪೋಲ್ವ ನಾಮವ ಇಟ್ಟು ಅಂದಿಗೆ ಘಲುಕೆನ್ನುತ
ಎನ ಮುಂದೆ ಬಂದು ನಿಂತಿದ್ದನಲ್ಲೆ ॥ ೧ ॥

ಮಕರ ಕುಂಡಲವನಿಟ್ಟು ತಿಮ್ಮಯ್ಯ ತಾ
ಕಸ್ತೂರಿ ತಿಲಕವನಿಟ್ಟು ಗೆಜ್ಜೆ ಘಲುಕೆನುತ
ಸ್ವಾಮಿ ತಾ ಬಂದು ನಿಂತಿದ್ದನಲ್ಲೆ ॥ ೨ ॥

ಮುತ್ತಿನ ಪಲ್ಲಕ್ಕಿ ಯತಿಗಳು
ಹೊತ್ತು ನಿಂತಿದ್ದರಲ್ಲೆ ಛತ್ರ ಚಾಮರದಿಂದ
ರಂಗಯ್ಯನ ಉತ್ಸವ ಮೂರುತಿಯ     || ೩ ||

ತಾಮರ ಕಮಲದಲಿ ಕೃಷ್ಣಯ್ಯ ತಾ
ಬಂದು ನಿಂತಿದ್ದನಲ್ಲೆ ವಾಯು ಬೊಮ್ಮಾದಿಗಳು
ರಂಗಯ್ಯನ ಸೇವೆಯು ಮಾಡುವರೆ     || ೪ ||

ನವರತ್ನ (ತೆತ್ತಿಸಿದ) (ಕೆತ್ತಿಸಿದ) ಸ್ವಾಮಿ ಎನ್ನ
ಹೃದಯ ಮಂಟಪದಲ್ಲಿ ಸರ್ವಾಭರಣದಿಂದ
ಪುರಂದರ ವಿಠಲನ ಕೂಡಿದೇನೆ     || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಮಕರ ಕುಂಡಲ** = ಮೊಸಳೆ ಆಕೃತಿಯ ಕರ್ಣಾಭರಣ
**ಪೊನ್ನದ** – ಹೊನ್ನಿನ, ಬಂಗಾರದ.
**ಪೋಲ್ವ** – ಪೊಳೆವ, ಹೊಳೆಯುವ.
**ಬೊಮ್ಮಾದಿಗಳು** – ಬ್ರಹ್ಮನೇ ಮೊದಲಾದ ದೇವತೆಗಳು.
**ತೆತ್ತಿಸು** = ಹತ್ತಿರಕ್ಕೆ ತರು, ಪೋಣಿಸು, ಒಳಹೊಗಿಸು, ಮೊಳೆ ಮೊದಲಾದವನ್ನು ಒಳ ಸೇರಿಸು

**Classification:** Keerthane
**Ankita:** purandara vittala
**Location:** Tirupati
**Category:** Srinivasa Stuti
**Sub-Category:** kanasu, tangi, bangara, abharana, Kasturi, ranga, padma, Krishna, hanuma, brahma, hrudaya, srinivasa, Tirupati, gejje,
**Pravachana:** NA
**Explanation:** NA